**ಸಾಕ್ಷಿಯನ್ನು ಇಂದು ದಿನಾಂಕ 04.07.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಅಪಘಾತವಾದಾಗ ನಾನು ಬಟಗೇರಾ ಗ್ರಾಮದಲ್ಲಿ ಇದ್ದೆ ಎಂದರೆ ಸರಿ. ನಾನು ಅಪಘಾತಕ್ಕೆ ಪ್ರತ್ಯಕ್ಷ ಸಾಕ್ಷಿ ಅಲ್ಲ ಎಂದರೆ ಸರಿಯಲ್ಲ. ಲಾರಿ ಚಾಲಕನನ್ನು ಪೊಲೀಸರು ಪಂಚನಾಮೆ ಮಾಡುವ ಕಾಲಕ್ಕೆ ಪೊಲೀಸ ಠಾಣೆಯಲ್ಲಿ ತೋರಿಸಿರುತ್ತಾರೆ. ಚಾಸಾ-10 ರವರು ಅಪಘಾತ ನಡೆದಿದ್ದರ ಬಗ್ಗೆ ನನಗೆ ಕರೆ ಮಾಡಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆದ ಸ್ಥಳ ಬಟಗೇರಾಯಿಂದ 6 ಕಿ.ಮೀ. ಅಂತರದಲ್ಲಿ ಇರುತ್ತದೆ. ಬಟಗೇರಾಯಿಂದ ಸೇಡಂಗೆ ಬರುವಾಗ ಸಾಮಾನ್ಯವಾಗಿ ಎಡಗಡೆ ಬರುತ್ತಾರೆ ಎಂದರೆ ಸರಿ. ಸದರಿ ರಸ್ತೆ ಮುಖ್ಯ ರಸ್ತೆ ಎಂದರೆ ಸರಿ. ಮುಖ್ಯ ರಸ್ತೆ ಆಗಿದ್ದ ಕಾರಣ ಸಾಕಷ್ಟು ವಾಹನಗಳು ತಿರುಗಾಡುತ್ತವೆ ಆದ್ದರಿಂದ ಅದು ಸರ್ವಿಸ್ ರಸ್ತೆ ಎಂದರೆ ಸರಿಯಲ್ಲ. ಅಪಘಾತ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. VCF ಕಂಪನಿಯವರಿಂದ ಹಂಸ ಹಾಕಿದ್ದಾರೆ ಎಂದರೆ ಸರಿ. ವಾಹನವನ್ನು ಅತೀ ವೇಗದಿಂದ ಚಲಾಯಿಸಿದ್ದ ಕಾರಣ ಹಂಸ ಇದಿದ್ದರಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಪಘಾತದ ಪರಿಹಾರ ಹಣ ಪಡೆಯುವ ಉದ್ದೇಶದಿಂದ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-10 ರವರು ಯಾವ ಸಂಖ್ಯೆಯಿಂದ ಕರೆ ಮಾಡಿರುತ್ತಾರೆ ಎಂದು ನನ್ನ ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸರಿ. ಲಾರಿ ಚಾಲಕ ಅಪಘಾತಪಡಿಸಿದ ನಂತರ ಲಾರಿ ಬಿಟ್ಟು ಹೋಗಿದ್ದ ಎಂದರೆ ಸರಿಯಲ್ಲ. ಅದಾದ ನಂತರ ಪೊಲೀಸರು ಬಂದಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH